ಪತ್ರಿಕಾ ಪ್ರಕಟಣೆ

## ಡಾ ಸಂಪತ್‌ಕುಮಾರಾಚಾರ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಜುಲೈ 5 (ಕರ್ನಾಟಕ ವಾರ್ತೆ) :

ಮೈಸೂರಿನ ಹೆಸರಾಂತ ಸಂಗೀತ ವಿದ್ವಾಂಸ ಡಾ ಸಂಪತ್‌ಕುಮಾರಾಚಾರ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ, ಗಾನ ಜಗತ್ತಿನಲ್ಲಿ ವಿಶೇಷ ಛಾಪು ಮೂಡಿಸಿರುವ ಡಾ ಸಂಪತ್‌ಕುಮಾರಾಚಾರ್ಯ ಅವರು ತಮ್ಮದೇ ಅಭಿಮಾನಿ ವರ್ಗವನ್ನು ಸೃಷ್ಠಿಸಿಕೊಂಡಿದ್ದರು. ಶ್ರೀಯುತರ ನಿಧನದಿಂದ ಸಂಗೀತ ಪ್ರಪಂಚದಲ್ಲಿ ಮೌನ ಆವರಿಸಿದಂತಾಗಿದೆ ಎಂದು ಶ್ರೀ ಸಿದ್ಧರಾಮಯ್ಯ ಅವರು ಬಣ್ಣಿಸಿದ್ದಾರೆ.

ಡಾ ಸಂಪತ್‌ಕುಮಾರಾಚಾರ್ಯ ಅವರ ಆತ್ಮಕ್ಕೆ ಶಾಂತಿ ದೊರಕಲೆಂದೂ, ಅವರ ಕುಟುಂಬ ವರ್ಗ ಹಾಗೂ ಅಭಿಮಾನಿ ವರ್ಗಕ್ಕೆ ಶ್ರೀಯುತರ ಅಗಲಿಕೆಯಿಂದ ಉಂಟಾದ ದುಃಖ ಭರಿಸುವ ಶಕ್ತಿ ನೀಡಲೆಂದೂ ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ

**********

ಡಿ ಪಿ ಎಂ